

ಸರ್' ಎನ್ನುತ್ತಾ ಸಾಹಿತ್ಯದ ರಚನೆಕಾರರನ್ನೂ ವ್ಯಂಗ್ಯ ಮಾಡುತ್ತಾನೆ. ಕೊನೆಗೆ ಮುಗಿಸುವಾಗ 'ನನಗೆ ಅಂದ್ರೆ ಈ ನಿಮ್ಮ ಕ್ಯಾತನಿಗೆ, ಇಷ್ಟೇ ಬರೆಯೋಕಾಗ್ತಿರೋದು. ತಪ್ಪಾಗಿದ್ರೆ ಕ್ಷಮಿಸಿ ಸಾರ್...' ಎಂದು ವಿನಯದಿಂದಲೇ ನಮ್ಮೊಳಗೆ ಗಟ್ಟಿಯಾಗಿ ನೆಲೆಯೂರುತ್ತಾನೆ. ತಾನೇ ತನ್ನ ಬಗ್ಗೆ 'ನಾನು ಸರಿ ಇಲ್ಲ ಸರ್, ಬೀದಿ ಬದೀಲಿ ಸೆಕೆಂಡ್ ಹ್ಯಾಂಡ್ ಅಂಗಡೀಲಿ ಪುಸ್ತಕಗಳನ್ನು ಓದಿ ಯೋಚನೆ ಮಾಡಿ ಬೆಳೆದವನು ನಾನು' ಎಂದು ತನ್ನ ಗುರುತನ್ನು ಹೇಳಿಕೊಳ್ಳುತ್ತಾನೆ. 'ನಾನು ತೀರಾ ಗುಜರಿ ನನ್ಮಗ ಸರ್' ಎಂದು ಹೇಳುವ, ಒಬ್ಬ ಕೊಳಕ, ಕೆದರಿದ ಕೂದಲಿನ ಅಷ್ಟೇನು ಶಿಸ್ತಿಲ್ಲದ ಒಬ್ಬ ಹುಡುಗನಾಗಿ ನಮ್ಮ ಕಣ್ಮುಂದೆ ಕಾಣುತ್ತಾನೆ. ಬಹುಶಃ 'ಅಕ್ಕ' ಕಾದಂಬರಿ ಓದಿದ ಎಲ್ಲರ ಒಳಗೂ ಕ್ಯಾತ ಇದೇ ರೂಪು ಪಡೆದುಕೊಂಡು ಬೇರುಬಿಟ್ಟಿರಲಿಕ್ಕೆ ಸಾಧ್ಯವಿದೆ.

ಅನಾಥಾಶ್ರಮದ ಗುಮಾಸ್ತ, ತನ್ನ ಬಾಲ್ಯದ ಲೋಕವನ್ನು ತೋರುತ್ತಾನೆ. ಆಗ ಆತ ನಲವತ್ತು ದಾಟದ, ಸಾದಾ ಅಂಗಿತೊಟ್ಟು, ಕೋಲು ಮುಖದ, ಕಂದು ಬಣ್ಣದ, ಕೈ ಕಾಲ ಮೇಲೆ ಒಂದಷ್ಟು ಗಾಯದ ಗುರುತಿರುವ ಸಾದಾ ಸೀದಾ ಮನುಷ್ಯನ ಹಾಗೆ ಭಾಸವಾಗುತ್ತಾನೆ. ಇಂತಹ ವ್ಯಕ್ತಿ ಒಂದು ಕುರ್ಚಿ ಮೇಲೆ ಕೂತು ತನ್ನದೇ ಕಥೆಯನ್ನು ಬರೆಯುತ್ತಿದ್ದಾನೆ. ಇಡಿಯಾಗಿ 'ಅಕ್ಕ' ಕಾದಂಬರಿ ಓದಿದ ಮೇಲೆ ಈ ವ್ಯಕ್ತಿ ನಮ್ಮ ಮನದೊಳಗೆ ಸದಾ ಪಾದರಸದಂತೆ ಚಟುವಟಿಕೆಯಲ್ಲಿರುವ, ಮಾಸಲು ಅಂಗಿತೊಟ್ಟ, ಚೂರು ಪಾರು ಹರಿದ ಚಡ್ಡಿ ಉಟ್ಟು, ಸದಾ ಓಡುತ್ತಾ ತಾನು ಒಡನಾಡುವ ಎಲ್ಲರ ಒಳಗೊಂದು ಹೊರ ಗೊಂದು ಇರುವ ವ್ಯಕ್ತಿತ್ವವನ್ನು ಬಯಲು ಮಾಡುತ್ತಾ ಸಮಾಜದ ಒಬ್ಬ ನಿಷ್ಠುರ ಕ್ರಿಟಿಕ್ ಆಗಿ ಕಾಣುತ್ತಾನೆ.

ಸದಾ ಚಡಪಡಿಕೆಯಲ್ಲಿರುವ ದೇವೀರಿಯನ್ನು ಕ್ಯಾತ ತನ್ನ ವಿವರಗಳಲ್ಲಿ ಕಟ್ಟುತ್ತಾ ಹೋದರೂ, ಅಕ್ಕನ ಮೇಲಿನ ಅಕ್ಕರೆಯೊಂದು ಅಡಿಗೆರೆಯಾಗಿ ಅಲ್ಲಿ ಇದ್ದೇ ಇರುತ್ತದೆ. ಸದಾ ಬೈಯುವ ಜಗಳಗಂಟಿ, ಕ್ಯಾತ ಮಲಗಿದಾಗ 'ಎದ್ದು ಓದಿಕಳಲೇ ಬೋಸೂಡಿ ಮಗನೇ' ಎಂದು ಬೈಯುವುದು, 'ಕ್ಯಾತ ಓದಿ ದೊಡ್ಡ ಮನುಷ್ಯ ಆಗಲಿ... ನಮ್ಮ ಕಷ್ಟ ನೀಗಲಿ' ಎನ್ನುವ ಕಕ್ಕುಲಾತಿಯಿಂದ. ಆದರೆ, ಕ್ಯಾತನ ತಲೆಗೆ ವಿದ್ಯೆ ಹತ್ತದೇ ಬಯಲೇ ಅವನಿಗೆ ಇಸ್ಕೂಲು. ಯಾವುದೇ ರಿಯಾಯಿತಿಗಳಿಲ್ಲದೆ ತನ್ನ ಮನುಷ್ಯ ಸಹಜ ನಡೆಗಳನ್ನು ಹೇಳುತ್ತಾ ಹೋಗುವ ಕ್ಯಾತ ಯಡವಟ್ಟನಂತೆ ಕಾಣಿಸಿದರೂ ವ್ಯವಸ್ಥೆಯ ಅಶಿಸ್ತಿನ ದೆಸೆಯಿಂದ ರೂಪುಗೊಂಡ ಜೀವವು ಸಜ್ಜನಿಕೆಯನ್ನೇ ಪ್ರಶ್ನಿಸತೊಡಗುವುದು ಸುಳ್ಳಲ್ಲ.

ಅವನು ಸದಾ ಚಡಪಡಿಸುವ ಎಲ್ಲವನ್ನೂ